# ಜಾಗತೀಕರಣದ ಫಲಶ್ರುತಿಯಾಗಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ದೈನಂದಿನ ಬದುಕಿನಲ್ಲಿ ಉಂಟಾಗುತ್ತಿರುವ ಪಲ್ಲಟಗಳು

**ಶ್ರೀಮತಿ ರೇಣುತಾಕ್ಷಿ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮಂಗಳೂರು.

**DOI: https://doi.org/10.5281/zenodo.17773603**

## ABSTRACT:

ಜಾಗತೀಕರಣವು ಕನ್ನಡ ಭಾಷೆ, ಸಂಸ್ಕೃತಿ ಮತ್ತು ದಿನನಿತ್ಯದ ಬದುಕಿನ ಮೇಲೆ ವ್ಯಾಪಕ ಮತ್ತು ಬಹುಮುಖ ಪರಿಣಾಮಗಳನ್ನು ಉಂಟುಮಾಡಿದೆ. ಆರ್ಥಿಕ ಕ್ಷೇತ್ರದ ವಿಸ್ತರಣೆ, ಐಟಿ ಉದ್ಯಮದ ಪ್ರಭಾವ ಮತ್ತು ಮಲ್ಟಿನ್ಯಾಷನಲ್ ಕಂಪನಿಗಳ ಸೃಷ್ಟಿ ಕನ್ನಡಿಗರ ಜೀವನಶೈಲಿಯನ್ನು ಬದಲಾಯಿಸಿ, ದ್ವಂದ್ವ ಭಾಷಾ ಪರಿಸರವನ್ನು ರೂಪಿಸಿವೆ. ಉದ್ಯೋಗ ಸಂವಹನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಂಗ್ಲ ಭಾಷೆಯ ಪ್ರಾಬಲ್ಯ ಹೆಚ್ಚಾದಂತೆ ಕನ್ನಡದ ಪದಸಂಪತ್ತು, ಲಿಪಿಬಳಕೆ ಮತ್ತು ನೈಜ ಭಾಷಾಭ್ಯಾಸ ಹಿಂಜರಿಕೆಯ ಸೂಚನೆಗಳು ಎದ್ದು ತೋರುತ್ತಿವೆ.

ಶಿಕ್ಷಣ ವಲಯದಲ್ಲಿಯೂ ಆಂಗ್ಲ ಮಾಧ್ಯಮ ಶಾಲೆಗಳ ಏರಿಕೆಯಿಂದ ಕನ್ನಡದ ಸ್ಥಾನಮಾನ ಕ್ರಮೇಣ ಹಿಮ್ಮೆಟ್ಟುತ್ತಿದ್ದು, ವಿದ್ಯಾರ್ಥಿಗಳ ಸಾಹಿತ್ಯ-ಸಂಸ್ಕೃತಿಯ ಸಂಪರ್ಕ ಕಡಿಮೆಯಾಗುತ್ತಿದೆ. ತಂತ್ರಜ್ಞಾನ ಮತ್ತು ಡಿಜಿಟಲ್ ವೇದಿಕೆಗಳು ಕನ್ನಡಕ್ಕೆ ಹೊಸ ಅವಕಾಶಗಳನ್ನು ತೆರೆಯುತ್ತಿವೆ. ಯೂಟ್ಯೂಬ್, ಒಟಿಟಿ, ಸಾಮಾಜಿಕ ಜಾಲತಾಣಗಳು ಕನ್ನಡ ಅಭಿವ್ಯಕ್ತಿಗೆ ಹೊಸದಿಕ್ಕು ತೋರಿಸುತ್ತಿವೆ.

ಸಂಸ್ಕೃತಿಯ ಹೈಬ್ರಿಡೀಕರಣದಿಂದ ಪಾಶ್ಚಾತ್ಯ ಆಚರಣೆಗಳು, ಉಡುಪು, ಜೀವನಶೈಲಿ ಮೊದಲಾದವು ಕನ್ನಡಿಗರ ದೈನಂದಿನ ಬದುಕಿನ ಭಾಗವಾಗುತ್ತಿದ್ದರೂ, ಪರಂಪರೆ ಹೊಸ ರೂಪಗಳಲ್ಲಿ ಉಳಿಯಲು ಪ್ರಯತ್ನಿಸುತ್ತಿದೆ. ಕುಟುಂಬ ವ್ಯವಸ್ಥೆ, ಮೌಲ್ಯಗಳು, ಜೀವನವಿಧಾನದಲ್ಲಿ ಬದಲಾವಣೆ ಕಂಡರೂ, ಕನ್ನಡ ಗುರುತನ್ನು ಬಲಪಡಿಸುವ ಚಟುವಟಿಕೆಗಳು ಮುಂದುವರಿಯುತ್ತಿವೆ. ಒಟ್ಟಿನಲ್ಲಿ ಜಾಗತೀಕರಣವು ಕನ್ನಡಕ್ಕೆ ಸವಾಲುಗಳನ್ನಷ್ಟೇ ಅಲ್ಲ, ಹೊಸ ಅವಕಾಶಗಳನ್ನೂ ನೀಡಿದ ಯುಗವಾಗಿದೆ. ಈ ಬದಲಾವಣೆಗಳ ನಡುವೆ ಭಾಷೆಯನ್ನು ಉಳಿಸಿ ಬೆಳೆಸುವುದು ಸಾಮಾಜಿಕ-ಸಾಂಸ್ಕೃತಿಕ ಜವಾಬ್ದಾರಿಯಾಗಿದೆ.

## KEYWORDS:

ಜಾಗತೀಕರಣ, ಕನ್ನಡಭಾಷೆ, ಸಂಸ್ಕೃತಿ, ತಂತ್ರಜ್ಞಾನ, ಹೈಬ್ರಿಡೀಕರಣ.

**ಪೀಠಿಕೆ:**

ಜಾಗತೀಕರಣವು ಇತ್ತೀಚಿನ ದಶಕಗಳಲ್ಲಿ ಜಗತ್ತಿನ ಪ್ರತಿಯೊಂದು ದೇಶದ ಮೇಲೆ ಹೊಸ ಬದಲಾವಣೆಯ ಅಲೆಗಳನ್ನು ಹರಡಿಸಿದ ಮಹತ್ವದ ಪ್ರಕ್ರಿಯೆಯಾಗಿದ್ದು, ರಾಷ್ಟ್ರಗಳ ನಡುವೆ ವ್ಯಾಪಾರ, ಸಂಸ್ಕೃತಿ, ತಂತ್ರಜ್ಞಾನ ಹಾಗೂ ಜ್ಞಾನ ವಿನಿಮಯವನ್ನು ವೇಗಗೊಳಿಸಿದೆ. ಇದರ ಪರಿಣಾಮದಿಂದ ಭಾರತದ ಎಲ್ಲಾ ಪ್ರಮುಖ ಭಾಷೆಗಳು ಬಾಹ್ಯ ಪ್ರಭಾವಗಳನ್ನು ಅನುಭವಿಸಿವೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಬದುಕಿನ ಪದ್ಧತಿಗಳು ಜಾಗತೀಕರಣದ ಒತ್ತಡಕ್ಕೆ ತಕ್ಕಂತೆ ಹೊಸ ರೂಪಗಳನ್ನು ತಾಳುತ್ತಿವೆ. ಉದ್ಯೋಗ ಕ್ಷೇತ್ರ, ಶಿಕ್ಷಣ ವ್ಯವಸ್ಥೆ, ತಂತ್ರಜ್ಞಾನ ಮತ್ತು ಮಾಧ್ಯಮ ಎಲ್ಲವೂ ಕನ್ನಡಿಗನ ದಿನನಿತ್ಯದ ಬದುಕನ್ನು ನಿಧಾನವಾಗಿಯಾದರೂ ಆಳವಾಗಿ ಬದಲಾಯಿಸುತ್ತಿವೆ. ಸಂಸ್ಕೃತಿಯ ಮೂಲ ಬಣ್ಣಗಳು ಮತ್ತು ಪೀಳಿಗೆಯಿಂದ ಪೀಳಿಗೆಗೆ ಬಂದ ಪರಂಪರೆಯ ಗಾಢತೆಯಲ್ಲಿ ಕೆಲವು ಕುಸಿತಗಳು ಕಂಡುಬಂದರೂ ಅದೇ ಸಮಯದಲ್ಲಿ ಹೊಸ ಅವಕಾಶಗಳನ್ನೂ ಕನ್ನಡಕ್ಕೆ ಈ ಯುಗ ಕೊಡುತ್ತಿರುವುದು ಸ್ಪಷ್ಟ. ಈ ಪ್ರಬಂಧವು ಜಾಗತೀಕರಣವು ಕನ್ನಡ ಭಾಷೆ, ಸಂಸ್ಕೃತಿ ಹಾಗೂ ದೈನಂದಿನ ಬದುಕಿನಲ್ಲಿ ತಂದಿರುವ ಬದಲಾವಣೆಗಳನ್ನು ಹಂತಹಂತವಾಗಿ ವಿಶ್ಲೇಷಿಸುತ್ತದೆ.

**ಕನ್ನಡಿಗನ ಆರ್ಥಿಕ ಬದುಕಿನ ಮೇಲೆ ಜಾಗತೀಕರಣದ ಪರಿಣಾಮ:**

ಜಾಗತೀಕರಣದ ಪ್ರಭಾವ ಪ್ರಪ್ರಥಮವಾಗಿ ಆರ್ಥಿಕ ಕ್ಷೇತ್ರದಲ್ಲೇ ಗೋಚರಿಸುತ್ತದೆ. ಐಟಿ ಉದ್ಯಮದ ವೇಗದ ಬೆಳವಣಿಗೆ, ಮಲ್ಟಿನ್ಯಾಷನಲ್ ಕಂಪನಿಗಳ ಪ್ರವೇಶ ಮತ್ತು ಜಾಗತಿಕ ಸರಕು–ಸೇವಾ ಮಾರುಕಟ್ಟೆಗಳ ವಿಸ್ತರಣೆ ಕನ್ನಡಿಗನ ಜೀವನಶೈಲಿಗೆ ಹೊಸ ಆಯಾಮಗಳನ್ನು ತಂದುಕೊಟ್ಟಿವೆ. ಬೆಂಗಳೂರನ್ನು 'ಭಾರತದ ಸಿಲಿಕಾನ್ ವ್ಯಾಲಿ' ಎಂದು ಕರೆಯುವ ಮಟ್ಟಕ್ಕೆ ತರುವಲ್ಲಿ ಜಾಗತೀಕರಣ ಪ್ರಮುಖ ಪಾತ್ರವಹಿಸಿದೆ.

ಐಟಿ ಉದ್ಯೋಗಗಳಲ್ಲಿ ಕನ್ನಡಕ್ಕಿಂತ ಆಂಗ್ಲಭಾಷೆಯೇ ಸಂವಹನದ ಪ್ರಧಾನ ಮಾಧ್ಯಮವಾಗಿರುವುದರಿಂದ, ಕನ್ನಡ ಮಾತುಕತೆಯಲ್ಲಿಯೂ ಆಂಗ್ಲ ಪದಗಳ ಕಡ್ಡಾಯ ಪ್ರವೇಶವಾಗಿದೆ. ಉದಾಹರಣೆಗೆ, ಮೀಟಿಂಗ್, ಟಾರ್ಗೆಟ್, ಡೆಡ್‌ಲೈನ್, ಪ್ರೆಸೆಂಟೇಶನ್, ರಿಪೋರ್ಟ್ ಎಂಬ ಪದಗಳು ಕನ್ನಡ ಸಂಭಾಷಣೆಯ ಸಾಮಾನ್ಯ ಭಾಗಗಳಾಗಿವೆ. ಈ ರೀತಿಯ ದ್ವಂದ್ವ ಭಾಷಾ ಪ್ರವಾಹವು ಕನ್ನಡ ಪದಸಂಪತ್ತಿಗೆ ಹೊಸದಾರಿಗಳನ್ನು ತೆರೆದರೂ, ಮೂಲ ಕನ್ನಡದ ಶೈಲಿ ಮತ್ತು ಸೊಗಸು ಕುಗ್ಗುವ ಅಪಾಯವನ್ನೂ ತರುತ್ತದೆ. ಹೆಚ್ಚುವರಿಯಾಗಿ, ಐಟಿ ಮತ್ತು ಸ್ಟಾರ್ಟ್ ಅಪ್ ಸಂಸ್ಕೃತಿ ವೇಗವಾಗಿ ಬೆಳೆದಂತೆ ಉದ್ಯೋಗವಕಾಶಗಳು ಹೆಚ್ಚಾದರೂ, ಗ್ರಾಮೀಣ ಮತ್ತು ನಗರ ವೈಷಮ್ಯ ಹೆಚ್ಚುತ್ತಿರುವುದು ಜಾಗತೀಕರಣದ ಮತ್ತೊಂದು ಪರಿಣಾಮ.

## ಶೈಕ್ಷಣಿಕ ವಲಯದ ಬದಲಾವಣೆ: ಭಾಷಾ ಆದ್ಯತೆಯ ಪರಿವರ್ತನೆ

ಶೈಕ್ಷಣಿಕ ವಲಯದ ಬದಲಾವಣೆಗಳು ಜಾಗತೀಕರಣದ ಅತ್ಯಂತ ಪ್ರಬಲ ಪ್ರತಿಫಲವಾಗಿ ಕಾಣಿಸುತ್ತವೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಆಂಗ್ಲ ಮಾಧ್ಯಮ ಶಾಲೆಗಳ ವಿಸ್ತರಣೆ ಭಾರೀ ಪ್ರಮಾಣದಲ್ಲಿ ಸಂಭವಿಸಿರುವುದರಿಂದ ಕನ್ನಡ ಭಾಷೆಯ ಶಿಕ್ಷಣದ ಮಹತ್ವ ಕ್ರಮೇಣ ಹಿಮ್ಮೆಟ್ಟುತ್ತಿದೆ. ಒಂದು ಕಾಲದಲ್ಲಿ ಕನ್ನಡವೇ ಶಿಕ್ಷಣದ ಮೂಲಸ್ಥಂಭವಾಗಿತ್ತು. ಈಗ ಅನೇಕ ವಿದ್ಯಾರ್ಥಿಗಳಲ್ಲಿ ಅದು ಎರಡನೇ ಅಥವಾ ಮೂರನೇ ಭಾಷೆಯ ಸ್ಥಾನಕ್ಕೆ ಮಾತ್ರ ಸೀಮಿತವಾಗುತ್ತಿರುವುದು ವಿಷಾದನೀಯ. ಖಾಸಗಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ಕಂಡುಬರುವ 'ಕನ್ನಡ ಓದಲು ಸುಲಭ ಆದರೆ ಬರೆಯಲು ಕಷ್ಟ' ಎಂಬ ಧೋರಣೆ ಕೇವಲ ಭಾಷಾ ಕೌಶಲ್ಯದ ಕುಸಿತವಲ್ಲ: ಇದು ಕನ್ನಡ ಸಾಹಿತ್ಯ–ಸಂಸ್ಕೃತಿಯಲ್ಲಿನ ಅಕ್ಷರಾಸಕ್ತಿ ಕ್ರಮೇಣ ಇಳಿಮುಖವಾಗುವುದರ ಸೂಚಕವೂ ಆಗಿದೆ. ಹಾಗೆಯೇ ಕನ್ನಡದ ಕಥೆ, ಪದ್ಯ, ನಾಟಕ, ಜನಪದ ಸಂಗತಿಗಳೊಂದಿಗೆ ವಿದ್ಯಾರ್ಥಿಗಳ ನೈಜ ಸಂಪರ್ಕ ಕಡಿಮೆಯಾಗುತ್ತಿರುವುದು ಭಾಷೆಯ ಸಂಸ್ಕೃತಿ–ಸ್ಮೃತಿಯನ್ನು ದುರ್ಬಲಗೊಳಿಸುವ ಅಪಾಯವನ್ನು ತಿಳಿಸುತ್ತದೆ.

ಈ ಭಾಷಾ ಪರಿವರ್ತನೆ ಕೇವಲ ವಿದ್ಯಾರ್ಥಿಗಳ ಆಯ್ಕೆಯಿಂದ ಮಾತ್ರ ಬರುವುದಿಲ್ಲ : ಅದು ಕುಟುಂಬ ಮತ್ತು ಸಮಾಜದ ಒಟ್ಟು ಮನೋಭಾವದಿಂದ ರೂಪುಗೊಳ್ಳುತ್ತದೆ. ಜಾಗತೀಕರಣದ ಯುಗದಲ್ಲಿ ಪೋಷಕರು ಉದ್ಯೋಗ, ವಿದೇಶ ಶಿಕ್ಷಣ, ಜಾಗತಿಕ ಹಾದಿ ಮೊದಲಾದ ದೃಷ್ಟಿಯಿಂದ ಮಕ್ಕಳಿಗೆ ಆಂಗ್ಲ ಶಿಕ್ಷಣದಿಂದಲೇ 'ಮುಂದಿನ ಭವಿಷ್ಯ' ಎಂದು ಭಾವಿಸುತ್ತಿದ್ದಾರೆ. ಇದರಿಂದ ಕನ್ನಡ ಮಾಧ್ಯಮ ಶಾಲೆಗಳ ಸೇರಿಕೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದ್ದು, ಅನೇಕ ಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚುವ ಸ್ಥಿತಿಗೆ ತಲುಪಿವೆ. ಇದರ ಪರಿಣಾಮವಾಗಿ ಕನ್ನಡದ ಶಿಕ್ಷಣ ನಿಷ್ಕ್ರೀಯಗೊಳ್ಳುವುದಲ್ಲದೆ, ಮುಂದಿನ ಪೀಳಿಗೆಗೆ ಸುಂದರವಾದ ಭಾಷಾ ಪರಂಪರೆಯನ್ನು ಪೂರೈಸುವ ಒಂದು ಪ್ರಮುಖ ಮಾರ್ಗವೇ ಕಡಿದುಹೋಗುವ ಸಾಧ್ಯತೆ ಎದುರಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ, ಶಾಲೆಗಳು ಮತ್ತು ಸಮಾಜ, ಕನ್ನಡದ ಅಧಃಪತನವನ್ನು ತಡೆಯುವುದು ಅತ್ಯಾವಶ್ಯಕ. ಕನ್ನಡ ಮಾಧ್ಯಮ ಆಧುನೀಕರಣ, ಬೈಲಿಂಗ್ವಲ್ ಬೋಧನಾ ಮಾದರಿಗಳು, ಕನ್ನಡ ಡಿಜಿಟಲ್ ಸಂಪನ್ಮೂಲಗಳು ಅಂದರೆ ಸ್ಮಾರ್ಟ್ ತರಗತಿ ಕೊಠಡಿಗಳ ಬಳಕೆ, ಶೈಕ್ಷಣಿಕ ಮೊಬೈಲ್ ಅಪ್ಲಿಕೇಶನ್‌ಗಳು, ಆನ್‌ಲೈನ್ ಕಲಿಕಾ ವೇದಿಕೆಗಳು (e–learning platforms), ವರ್ಚುವಲ್ ರಿಯಾಲಿಟಿ (VR) ಮತ್ತು ಸಂವಾದಾತ್ಮಕ ಡಿಜಿಟಲ್ ವಿಷಯವನ್ನು ಬೋಧನೆಯಲ್ಲಿ ಬಳಸುವುದನ್ನು ಒಳಗೊಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಅಡಿಯಲ್ಲಿ ಮಾತೃಭಾಷೆಯಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ನೀಡುವ ಪ್ರಯತ್ನಗಳು ಸಹ ಇದರ ಭಾಗವಾಗಿವೆ. ಈ ನಿಟ್ಟಿನಲ್ಲಿ ಅಭಿವೃದ್ಧಿ ಕ್ರಮಗಳು ಜಾರಿಗೊಳ್ಳದಿದ್ದರೆ, ಶಿಕ್ಷಣ

ಕ್ಷೇತ್ರದಲ್ಲಿನ ಈ ಭಾಷಾ ಆದ್ಯತೆಯ ಪರಿವರ್ತನೆ ಮುಂದಿನ ದಶಕಗಳಲ್ಲಿ ಕನ್ನಡದ ಬದುಕಿನ ಮೇಲೆ ಹೆಚ್ಚು ಗಾಢವಾದ ಪರಿಣಾಮ ಬೀರುವ ಸಾಧ್ಯತೆ ಇದೆ.

**ಸಂಸ್ಕೃತಿಯ ಹೈಬ್ರಿಡೀಕರಣ: ಸಂಪ್ರದಾಯ ಮತ್ತು ಪಾಶ್ಚಾತ್ಯದ ಒಗ್ಗರಣೆ**

'ಸಾಂಸ್ಕೃತಿಕ ಹೈಬ್ರೀಡೀಕರಣ' ಅಂದರೆ ವಿಭಿನ್ನ ಸಂಸ್ಕೃತಿಗಳು ಮಿಶ್ರಣಗೊಂಡು ಹೊಸ ರೂಪ ಪಡೆಯುವ ಪ್ರಕ್ರಿಯೆ ಜಾಗತೀಕರಣದ ಮತ್ತೊಂದು ಪರಿಣಾಮ. ಕನ್ನಡಿಗರ ಆಚರಣೆ, ಉಡುಪು, ಹಬ್ಬಗಳು, ಕಲೆ ಇವುಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಹೆಚ್ಚಿರುವುದು ಗಮನಾರ್ಹ.

ವಾಲೆಂಟೈನ್ಸ್ ಡೇ, ಹಾಲೋವೀನ್ (ಅಕ್ಟೋಬರ್ 31) ಹೊಸ ವರ್ಷದ ಆಚರಣೆಗಳು, ಕ್ರಿಸ್ಮಸ್ ಪಾರ್ಟಿಗಳು ಇಂದು ಯುವಕರಲ್ಲಿ ಸಾಮಾನ್ಯವಾಗಿವೆ. ಅದೇ ವೇಳೆ ಪರಂಪರಾಗತವಾಗಿ ಆಚರಿಸಿಕೊಂಡು ಬರುತ್ತಿರುವ ಹಬ್ಬಗಳನ್ನು ಹೊಸ ಶೈಲಿಯಲ್ಲಿ ಆಚರಿಸುವುದು, ಥೀಮ್ ಆಧಾರಿತ ಮಂಟಪ, ಫೋಟೋಶೂಟ್, ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬದ ಪ್ರದರ್ಶನ ಇವೆಲ್ಲಾ ಜಾಗತೀಕರಣದ ಪರಿಣಾಮಗಳು. ಸಂಸ್ಕೃತಿಯ ಮೂಲ ಅಂಶಗಳು ಬದಲಾಗುತ್ತಿದ್ದರೂ, ಯುವಜನತೆ ಸಂಪ್ರದಾಯಗಳನ್ನು ಹೊಸರೂಪದಲ್ಲಿ ಜೀವಂತಪಡಿಸುತ್ತಿರುವುದು ಸಕಾರಾತ್ಮಕ ಬೆಳವಣಿಗೆ.

ಉಡುಪು ಸಂಸ್ಕೃತಿಯಲ್ಲಿಯೂ ಪಾಶ್ಚಾತ್ಯ ಶೈಲಿ ಪ್ರಾಬಲ್ಯ ಪಡೆದಿದೆ. ಸೀರೆ, ಲಂಗ-ದಾವಣಿ, ಕುರ್ತಾ-ಪೈಜಾಮ ಬದಲು ಜೀನ್ಸ್ ಪ್ಯಾಂಟ್, ಟೀ ಶರ್ಟ್, ವಿವಿಧ ವೆಸ್ಟರ್ನ್ ಡ್ರೆಸ್ ಸಾಮಾನ್ಯವಾಗಿವೆ. ದಿನನಿತ್ಯದ ವಸ್ತ್ರಧಾರಣೆಯಲ್ಲಿನ ಈ ಬದಲಾವಣೆ ಸಂಪ್ರದಾಯದ ನೈಜತೆಯನ್ನು ಬದಲಾಯಿಸಿದರೂ, ಇದು ಜಾಗತೀಕರಣದ ಸ್ವಾಭಾವಿಕ ಬೆಳವಣಿಗೆಯಾಗಿದೆ.

**ಮಾಧ್ಯಮ ಮತ್ತು ತಂತ್ರಜ್ಞಾನ: ಕನ್ನಡದ ಹೊಸ ಧ್ವನಿ**

ತಂತ್ರಜ್ಞಾನ ಕ್ರಾಂತಿ ಜಾಗತೀಕರಣದ ನೇರ ಪರಿಣಾಮ. ಸ್ಮಾರ್ಟ್‌ಫೋನ್, ಇಂಟರ್ನೆಟ್, ಒಟಿಟಿ, ಯೂಟ್ಯೂಬ್, ಇನ್‌ಸ್ಟಾಗ್ರಾಂ ಮುಂತಾದ ವೇದಿಕೆಗಳು ಕನ್ನಡಿಗರ ಅಭಿವ್ಯಕ್ತಿಗೆ ಹೊಸ ಆಯಾಮವನ್ನು ನೀಡಿವೆ.

ಕನ್ನಡ ಯೂಟ್ಯೂಬರ್‌ಗಳು ಹಾಸ್ಯ, ಗ್ರಾಮೀಣ ಜೀವನದ ವೈಚಿತ್ರ್ಯಗಳು, ಭಾಷಾ ಪಾಠಗಳು, ರೆಸಿಪಿ ವೀಡಿಯೋಗಳು, ಕಿರುಚಿತ್ರಗಳು ಮೊದಲಾದವುಗಳನ್ನು ಕನ್ನಡದಲ್ಲಿ ಸೃಷ್ಟಿಸುತ್ತಿದ್ದಾರೆ. ಇದು ಜಾಗತೀಕರಣದ ಮಧ್ಯೆ ಕನ್ನಡಕ್ಕೆ ಹೊಸ ಗುರುತನ್ನು ಕೊಡುತ್ತದೆ. ಆದರೆ ಇದೇ ಸಮಯದಲ್ಲಿ ಇಂಗ್ಲೀಷ್ ಸ್ಕ್ರಿಪ್ಟ್‌ನಲ್ಲಿ ಕನ್ನಡ ಬರೆಯುವುದು ಹಾಗೂ ಕನ್ನಡದ ಬದಲು ಇಂಗ್ಲಿಷಿನಲ್ಲಿಯೇ ಸಂವಹನ ಹೆಚ್ಚುತ್ತಿರುವುದು ಮೂಲಭಾಷೆಯ ಲಿಪಿ-ಪರಂಪರೆಗೆ ಸವಾಲು. ಅಂತೂ OTT

ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್ ಫ್ಲಾಟ್‌ಫಾರ್ಮ್‌ಗಳು ಕನ್ನಡ ಚಿತ್ರರಂಗಕ್ಕೆ ಜಾಗತಿಕ ವೇದಿಕೆಯನ್ನೂ ನೀಡಿವೆ. ಕನ್ನಡ ಸಿನೇಮಾ ವಿಶ್ವದ ವೀಕ್ಷಕರಿಗೆ ತಲುಪುತ್ತಿರುವುದು ಕನ್ನಡದ ಸಾಧನೆ.

**ಕುಟುಂಬ ಮತ್ತು ಸಮಾಜದ ಪರಿವರ್ತನೆ:**

ಜಾಗತೀಕರಣವು ಕುಟುಂಬ ವ್ಯವಸ್ಥೆಯನ್ನೂ ಬದಲಾವಣೆಗೊಳಿಸಿದೆ. ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತಾ, ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಮನೆಮಂದಿ ಒಟ್ಟಾಗಿ ಕುಳಿತು ಊಟ ಮಾಡುವ ಸಂಪ್ರದಾಯ, ಹಬ್ಬಗಳ ಆಚರಣೆಯ ವಿಧಾನ ರೂಪಾಂತರಗೊಂಡಿವೆ. 'ಫಾಸ್ಟ್‌ಫುಡ್ ಕಲ್ಚರ್, ವೀಕೆಂಡ್ ಲೈಫ್‌ಸ್ಟೈಲ್, ಮಾಲ್ ಕಲ್ಚರ್, ಪಾರ್ಟಿ ಇವು ಕುಟುಂಬ ಜೀವನದ ಹೊಸ ಅಂಶಗಳು. ಸಂಸ್ಕೃತಿಯ ಮೌಲ್ಯಗಳ ಕುಸಿತ ಕೆಲವು ಮಟ್ಟದಲ್ಲಿ ಗೋಚರಿಸಿದರೂ, ಕುಟುಂಬಗಳು ತಮ್ಮ ಸಂಪ್ರದಾಯಗಳನ್ನು ಹೊಸ ರೀತಿಯಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಸಾಂಸ್ಕೃತಿಕ ಸ್ಥೈರ್ಯಕ್ಕೆ ಸಾಕ್ಷಿ.

**ಭಾಷಾ ಗುರುತು: ಉಳಿವಿನ ಚಿಂತನೆ ಮತ್ತು ಹೊಸ ಹೋರಾಟ**

ಜಾಗತೀಕರಣವು ಕನ್ನಡಿಗರಲ್ಲಿ ಹೊಸ ಜಾಗೃತಿಯನ್ನು ಮೂಡಿಸುವುದರೊಂದಿಗೆ, ತಮ್ಮ ಭಾಷಾ ಗುರುತನ್ನು ಉಳಿಸಿಕೊಳ್ಳಬೇಕೆಂಬ ಅರಿವನ್ನುಂಟು ಮಾಡಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ಲರ್ನಿಂಗ್ ಆಪ್, ಆನ್‌ಲೈನ್ ಕನ್ನಡ ತರಗತಿಗಳು, ಕನ್ನಡ ಸಾಹಿತ್ಯ ಚಳವಳಿಗಳು, ಜನಪದ ಪುನರುತ್ಥಾನ ಕಾರ್ಯಕ್ರಮಗಳು ಕನ್ನಡವನ್ನು ಬಲಪಡಿಸಲು ಕಾರ್ಯನಿರ್ವಹಿಸುತ್ತಿವೆ. ಸಾಹಿತ್ಯದಲ್ಲಿ ಅನುವಾದ ಕೃತಿಗಳು, ಸ್ಥಳೀಯ ಕತೆಗಳ ಡಿಜಿಟಲೀಕರಣ, ಗ್ರಾಮೀಣ ಸಂಸ್ಕೃತಿಯ ಸಂಗ್ರಹ ಜಾಗತೀಕರಣದ ನಡುವೆ ಕನ್ನಡದ ಸಂರಕ್ಷಣೆಯ ದಿಕ್ಸೂಚಿಗಳಾಗಿವೆ.

**ಉಪಸಂಹಾರ:**

ಜಾಗತೀಕರಣವು ಕನ್ನಡದ ಮೇಲೆ ತಂದಿರುವ ಬದಲಾವಣೆಗಳು ಬಹಳಷ್ಟಿವೆ. ಒಂದು ಕಡೆ, ಆಂಗ್ಲೀಕರಣದ ಒತ್ತಡ, ಸಂಪ್ರದಾಯಗಳ ಸರಳೀಕರಣ, ಕುಟುಂಬ ಮೌಲ್ಯಗಳ ಹೊಸ ರೂಪ ಕನ್ನಡದ ಮೂಲ ಆತ್ಮವನ್ನು ಪ್ರಶ್ನಿಸುತ್ತಿದ್ದರೂ, ಇನ್ನೊಂದು ಕಡೆ, ಕನ್ನಡ ಡಿಜಿಟಲ್ ಕಂಟೆಂಟ್, ಕನ್ನಡ ಸಿನೆಮಾ ಗ್ಲೋಬಲೈಸೇಶನ್, ಕನ್ನಡ ಎಜುಕೇಶನಲ್ ಇನ್ನೋವೇಶನ್ ಮುಂತಾದ ಎಲ್ಲವೂ ಹೊಸ ಅವಕಾಶಗಳ ಬಾಗಿಲು ತೆರೆಯುತ್ತಿವೆ. ಆದ್ದರಿಂದ ಜಾಗತೀಕರಣವು ನಷ್ಟವನ್ನೇ ತರುತ್ತದೆ ಎನ್ನುವುದೂ ತಪ್ಪು; ಸಂಪೂರ್ಣ ಲಾಭವನ್ನೇ ತರುತ್ತದೆ ಎನ್ನುವುದೂ ಸರಿಯಲ್ಲ. ಬದಲಾವಣೆಯ ಮಧ್ಯದಲ್ಲಿ ಕನ್ನಡ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ಸಮಾಜ, ಸರ್ಕಾರ, ಶೈಕ್ಷಣಿಕ ವಲಯ ಮತ್ತು ಜನಸಾಮಾನ್ಯರಲ್ಲಿದೆ. ಜಾಗತೀಕರಣದ

ಹಾದಿಯಲ್ಲಿ ನಡೆವಾಗ, ಕನ್ನಡದ ಬಣ್ಣ, ಆತ್ಮ ಮತ್ತು ಸೊಗಸು ಕಳೆದುಕೊಳ್ಳದೇ ಮುಂದಿನ ಪೀಳಿಗೆಗೆ ತಲುಪಿದರೆ, ಕನ್ನಡದ ಭವಿಷ್ಯ ನಿಶ್ಚಿತವಾಗಿಯೂ ಬೆಳಕಿನ ದಿಕ್ಕಿನಲ್ಲಿರುತ್ತದೆ. ಜಾಗತೀಕರಣದ ಈ ಕಾಲದಲ್ಲೂ ತಾಯ್ನಾಡಿನ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಮೌಲ್ಯವನ್ನು ಕಡೆಗಣಿಸದೆ, ಅದರ ಅಗತ್ಯತೆಯನ್ನು ಗುರುತಿಸಿ ತಕ್ಕಮಟ್ಟಿಗೆ ಬೆಳೆಸಬೇಕಾದುದು ಅನಿವಾರ್ಯವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಮಹೇಶನ್, (2002), ಜಾಗತೀಕರಣ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
2. ದಸ್ತಗಿರಸಾಬ್ ದಿನ್ನಿ, (2004), ಜಾಗತೀಕರಣ ಮತ್ತು ಸಂಸ್ಕೃತಿ, ಕನಸು ಪ್ರಕಾಶನ, ರಾಯಚೂರು.
3. ಗವೀಶ ಹಿರೇಮಠ, (2007), ಜಾಗತೀಕರಣ ಮತ್ತು ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.
4. ಜಗದೇಶ್ ಕೊಪ್ಪ ಎನ್., (2009), ಜಾಗತೀಕರಣ ಮತ್ತು ಗ್ರಾಮ ಭಾರತ, ಪುಸ್ತಕ ಪ್ರೀತಿ ಚಿಂತನ ಗ್ರಂಥಮಾಲೆ, ಹಾವೇರಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.